# ಕೆಥೋಲಿಕ್ ಯುವಕರ ಸಮಾವೇಶಕ್ಕೆ ಚಾಲನೆ



■ **ವಿಕ ಸುದ್ದಿಲೋಕ** ಮಂಗಳೂರು

ಯುವಕರಲ್ಲಿ ನಾಯಕತ್ವ ಗುಣಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಬುಧವಾರ ನಗರದ ವಾಮಂಜೂರು ಸಂತ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಕ್ಯಾಥೊಲಿಕ್ ಯುವಕರ ಸಮಾವೇಶ ಉದ್ಘಾಟನೆ ನಡೆಯಿತು.

ಸಮಾವೇಶದ ಅಂಗವಾಗಿ ರಾಜ್ಯ ವ್ಯಾಪ್ತಿ ಸಂಚರಿಸಿದ ರಾಷ್ಟ್ರೀಯ ಯುವ ಸಮಾವೇಶದ ಶಿಲುಬೆಯ ಹಸ್ತಾಂತರ ಕಾರ್ಯಕ್ರಮ ನಡೆಯಿತು. ಮಂಗಳೂರು ಐಸಿವೈಎಂ (ಇಂಡಿಯನ್ ಕ್ಯಾಥೋಲಿಕ್ ಯೂತ್ ಮೂವ್‌ಮೆಂಟ್)ತಂಡ ಈ ಶಿಲುಬೆಯನ್ನು ಕರ್ನಾಟಕ ರೀಜನಲ್ ಹಾಗೂ ರಾಷ್ಟ್ರೀಯ ಸಮಿತಿಗೆ ನೀಡಿದರು.

ಬೆಳ್ತಂಗಡಿ ಬಿಷಪ್ ಡಾ.ಲಾರೆನ್ಸ್ ಮುಕ್ಕೋಯಿ ಅವರು ಕ್ಯಾಥೊಲಿಕ್ ಯುವಕರ ಸಮಾವೇಶ ಮಹತ್ವ ಹಾಗೂ ಯೇಸುವಿನ ತ್ಯಾಗಮಯ ಬದುಕಿನ ಕುರಿತು ಮಾತನಾಡಿ, ಯುವಜನತೆ ಬದುಕಿನಲ್ಲಿ ಅಗತ್ಯವಾಗಿ ಗುರಿಯನ್ನು ಹೊಂದಬೇಕು. ಈ ಬಳಿಕ ಅದನ್ನು ಸಾಧಿಸುವ ಛಲವನ್ನು ಹುಟ್ಟುಹಾಕುವ ಮೂಲಕ ಬದುಕಿನಲ್ಲಿ ದೇವರನ್ನು ಕಾಣಬೇಕು. ಈ ಮೂಲಕ ದೇಶವನ್ನು ಬಲಪಡಿಸುವ ಕೆಲಸ ನಡೆಯಬೇಕು ಎಂದರು.

ವಿಶೇಷ ಬಲಿಪೂಜೆಯ ಬಳಿಕ ರಾಷ್ಟ್ರೀಯ ಧ್ವಜ, ಪೋಪ್ ಧ್ವಜ ಹಾಗೂ ಐಸಿವೈಎಂ ಧ್ವಜಗಳನ್ನು ಹಾರಿಸಲಾಯಿತು. ಬೆಂಗಳೂರಿನ ಆರ್ಚ್ ಬಿಷಪ್ ಡಾ. ಬರ್ನಾರ್ಡ್ ಮೊರಾಸ್ ವಿಶೇಷ ಬಲಿಪೂಜೆಯನ್ನು ನೆರವೇರಿಸಿದರು. ಯೂತ್ ಕೌನ್ಸಿಲ್ ಆಫ್ ಕ್ಯಾಥೋಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ(ಸಿಬಿಸಿಐ)ದ ಅಧ್ಯಕ್ಷ, ಬಳ್ಳಾರಿ ಬಿಷಪ್ ಹೆನ್ರಿ ಡಿಸೋಜ, ಮಂಗಳೂರು ಬಿಷಪ್ ಡಾ.ಅಲೋಶಿಯಸ್ ಪಾವ್ಲ್ ಡಿಸೋಜ, ಸಿಂಧಾ ದುರ್ಗಾದ ಬಿಷಪ್ ರೆ.ಆಲ್ವಿನ್ ಬ್ರಿಟ್ಟೋ ಸೇರಿದಂತೆ ಮಂಗಳೂರು ಧರ್ಮಪ್ರಾಂತ್ಯದ ಸಾಕಷ್ಟು ಧರ್ಮಗುರುಗಳು ಬಲಿಪೂಜೆಯಲ್ಲಿ ಭಾಗವಹಿಸಿದ್ದರು.